



# ಟೀಚರ್ ಕಷ್ಟ-ಸುಖ

ತೆರೆದುಕೊಂಡ ಮೊದಮೊದಲ ಉದ್ಯೋಗಗಳಲ್ಲಿ ಶಿಕ್ಷಕವೃತ್ತಿಯೂ ಒಂದು. ಅಂದೊಂದು ಕಾಲದಲ್ಲಿ ಮಹಿಳೆಯರಿಗೆ ಶಿಕ್ಷಕವೃತ್ತಿ ಒಂದು 'ಕಂಫರ್ಟ್ ಜೋನ್' ಒದಗಿಸಿತ್ತು. ಸ್ವಾಭಿಮಾನದ ಬದುಕು ಕಟ್ಟಿಕೊಳ್ಳಲು ವೇದಿಕೆ ಸೃಷ್ಟಿಸಿತ್ತು. ಜೊತೆಗೆ ಹೆಚ್ಚು ಖುಷಿ, ನೆಮ್ಮದಿ, ಕ್ರಿಯಾಶೀಲತೆಯ ಕ್ಷೇತ್ರವೂ ಆಗಿತ್ತು.

ಆದರೆ ಇಂದಿನ ಶಿಕ್ಷಕಿಯರ ಪರಿಸ್ಥಿತಿ ನೋಡಿದರೆ ಅವರು ಮುಂದೆ ಹೋಗುತ್ತಿದ್ದಾರೋ ಅಥವಾ ಸಾವಿತ್ರಿಬಾಯಿ ಅವರ ಕಾಲಮಾನಕ್ಕೇ ಮರಳುತ್ತಿದ್ದಾರೋ ಎಂಬ ಅನುಮಾನ ಹುಟ್ಟದಿರದು. ಫುಲೆ ಈಗ ಇದ್ದಿದ್ದರೆ, ಮೂಗಿಗಿಂತ ಮೂಗುತಿ ಭಾರ ಎಂಬ ಸ್ಥಿತಿಯಲ್ಲಿ ನರಳುತ್ತಿರುವ ಶಿಕ್ಷಕಿಯರನ್ನು ಕಂಡು ಮರುಗುತ್ತಿದ್ದರೇನೊ! ಅವರ ಬಿಡುಗಡೆಗಾಗಿ ಹೊಸದೊಂದು ಹೋರಾಟ ಆರಂಭಿಸುತ್ತಿದ್ದರೇನೋ!

## ಹೊಣೆಗಾರಿಕೆಗಳ ಹೊರೆ

ಶಿಕ್ಷಕಿಯರ ಕೆಲಸ ಏನು? ಈ ಪ್ರಶ್ನೆಗೆ ಪುಟ್ಟ ಮಗುವಾದರೂ ಥಟ್ಟನೇ ಉತ್ತರಿಸುತ್ತದೆ; 'ಪಾಠ ಮಾಡುವುದು'. ಹೆಚ್ಚೆಂದರೆ ಪಠ್ಯೇತರ ಚಟುವಟಿಕೆಗಳಲ್ಲಿಯೂ ವಿದ್ಯಾರ್ಥಿಗಳು ಕ್ರಿಯಾಶೀಲರಾಗಿ ತೊಡಗಿಕೊಳ್ಳುವಂತೆ ಅಣಿಗೊಳಿಸುವುದು. ಆದರೆ ಮಕ್ಕಳನ್ನು ಪಠ್ಯೇತರ ಚಟುವಟಿಕೆಗಳಿಗೆ ಅಣಿಗೊಳಿಸುವುದು ಒತ್ತಟ್ಟಿಗಿರಲಿ, ತಾವೇ 'ಪಠ್ಯೇತರ' ಚಟುವಟಿಕೆಗಳನ್ನು ನಿಭಾಯಿಸಲಾಗದೆ ಒದ್ದಾಡುತ್ತಿದ್ದಾರೆ.

ಕ್ಷೀರಭಾಗ್ಯ, ಬಿಸಿಯೂಟ, ವಿದ್ಯಾರ್ಥಿ ವೇತನ, ದಾಖಲೆ ನಿರ್ವಹಣೆ ಇವುಗಳಲ್ಲೇ ಅವರ ಅರ್ಧ ದಿನ ಕಳೆಯುತ್ತದೆ. ಇನ್ನು ಅಡುಗೆ ಸಿಬ್ಬಂದಿ ಗೈರಾದರೆ ಆ ಕೆಲಸವನ್ನೂ ಶಿಕ್ಷಕರೇ ಪೂರೈಸಿಕೊಳ್ಳಬೇಕು. ಅದರಲ್ಲೂ ಶಿಕ್ಷಕಿಯರಿಗೆ ಇಂತಹ ಕೆಲಸಗಳು ಬಹಳ ಬೇಗ ಅಂಟಿಕೊಳ್ಳುತ್ತವೆ. ಎಷ್ಟೆಂದರೂ ಅಡುಗೆ ಮಾಡುವುದು 'ಅವಳ' ಆಜನ್ಮಸಿದ್ಧ



ಸವಿತಾ

ಕರ್ತವ್ಯವಲ್ಲವೇ! ಒಬ್ಬ ಶಿಕ್ಷಕಿ ಅನ್ನಪೂರ್ಣೆಯಾಗಿ, ಆರೋಗ್ಯ ಕಾರ್ಯಕರ್ತೆಯಾಗಿ, ಗುಮಾಸ್ತೆಯಾಗಿ, ಕಂಪ್ಯೂಟರ್ ಆಪರೇಟರ್ ಆಗಿ, ಕೊನೆಗೆ ಆಯಾ ಆಗಿಯೂ ಇರಬೇಕು! ಪಟ್ಟಿ ಇಷ್ಟಕ್ಕೆ ಮುಗಿಯುವುದಿಲ್ಲ. ಈ ಬಗೆಯ ಶಾಲಾ ಜವಾಬ್ದಾರಿ ಜೊತೆಗೆ ಚುನಾವಣಾ ಕಾರ್ಯ, ಗಣತಿ, ಸಮೀಕ್ಷೆಯಲ್ಲೂ ತೊಡಗಬೇಕು. ಇಷ್ಟೆಲ್ಲ ಹೊಣೆಗಾರಿಕೆಗಳ ನೊಗ ಹೊತ್ತು ದಣಿದು ಬಂದ ಅವಳಿಗೆ ಕುಟುಂಬ ನಿರ್ವಹಣೆಯ ಜವಾಬ್ದಾರಿಯಿಂದಲಾದರೂ ವಿನಾಯ್ತಿ ಸಿಗಬಹುದೇ? ಅಂಥ ಮಾತೇ ಇಲ್ಲ ಬಿಡಿ. 'ಅಷ್ಟೆಲ್ಲ ಕಷ್ಟ ಆದ್ರೆ ಕೆಲಸ ಬಿಟ್ಟು ಮನೇಲಿರು' ಎಂಬ ಉತ್ತರ ಸಿದ್ಧವಾಗಿಯೇ ಇರುತ್ತದೆ.

ವೃತ್ತಿ, ಇಲಾಖೆ ವಿಧಿಸುವ ಕಾರ್ಯ, ಕುಟುಂಬ ನಿರ್ವಹಣೆ – ಇವುಗಳ ನಡುವೆ ಇಂದಿನ ಶಿಕ್ಷಕಿ ನಲುಗುತ್ತಿದ್ದಾಳೆ. ಈ ಹಿಂದೆ ಮಕ್ಕಳಿಗೆ ಪಾಠ ಮಾಡುವುದೊಂದೇ ಶಿಕ್ಷಕ ವರ್ಗದ ಕರ್ತವ್ಯವಾಗಿತ್ತು. ಆದರೆ, ಇಂದು ಹಲವಾರು ಕಾರ್ಯಗಳ ಜೊತೆಗೆ ಮಕ್ಕಳಿಗೆ ಪಾಠಮಾಡಬೇಕು. ಇದರಿಂದ ಸಹಜವಾಗಿ ಮಕ್ಕಳ ಶೈಕ್ಷಣಿಕ ಬೆಳವಣಿಗೆ ಮೇಲೆ ಪರಿಣಾಮ ಬಿದ್ದೇ ಬೀಳುತ್ತದೆ. ವಿದ್ಯಾರ್ಥಿಗಳ ಶೈಕ್ಷಣಿಕ ಮಟ್ಟ ಹಿಂದೆ ಬಿದ್ದರೆ ಅದಕ್ಕೆ ಗುರಿಯಾಗಿಸುವುದು ಶಿಕ್ಷಕ ವರ್ಗವನ್ನೇ. 'ಸರಿಯಾಗಿ ಬೋಧನೆ ಮಾಡಿಲ್ಲ' ಎಂಬ ಹಣೆಪಟ್ಟಿ ಕಟ್ಟಿಕೊಂಡು ಓಡಾಡಬೇಕು. ಜೊತೆಗೆ ನೋಟಿಸ್ ಜಾರಿ, ದೂರದ ಸ್ಥಳಕ್ಕೆ ವರ್ಗಾವಣೆ.

## ಮಕ್ಕಳ ಭವಿಷ್ಯಕ್ಕೆ ಹೊಣೆ ಯಾರು?

'ಶಿಕ್ಷಣ ಇಲಾಖೆ ಜೊತೆಗೆ ಇತರ ಇಲಾಖೆಗಳು ನಿಯೋಜಿಸುವ ಕಾರ್ಯಗಳಿಗೂ ನಾವು ಸನ್ನದ್ಧರಾಗಿರಬೇಕು. ಹತ್ತು–ಹಲವು ಕಾರ್ಯಗಳ ನಡುವೆ ಮಕ್ಕಳಿಗೆ ಪಾಠ ಮಾಡಲು ಸಮಯವೇ ಸಿಗುವುದಿಲ್ಲ' ಎಂದು ಬೇಸರ ತೋಡಿಕೊಳ್ಳುತ್ತಾರೆ ಬೆಂಗಳೂರಿನ ಹೊರವಲಯದ ಗಾಣಿಗರಹಳ್ಳಿ ಸರ್ಕಾರಿ ಕಿರಿಯ ಪ್ರಾಥಮಿಕ ಶಾಲೆಯ ಶಿಕ್ಷಕಿ ಎಚ್. ವಿ. ಸವಿತಾ. ಪಾಠ ಮಾಡಲು ಸಮಯ ಸಿಗದ ಅಸಹಾಯಕತೆಯ ಜೊತೆಗೆ ಸರ್ಕಾರ ವಹಿಸುವ ಕೆಲಸ ನಿರ್ವಹಿಸುವಾಗ ಎದುರಾಗುವ ಸವಾಲುಗಳ



ಶ್ರೀದೇವಿ ಕೆರೆಮನೆ